ಸಂಕಟದಿಂದ ಪಾರ ಆಗ್ತೀರಿ ನೀವು...' ನಮ್ಮ ಗುಂಪಿನ ಮಿತ್ರರೊಬ್ಬರು ಅಂದರು. 'ಏನ್ ಹೇಳ್ರಪಾ... ಮಾಡುದಾದ್ರ ಆ ಕೆಲಸ ಮಾಡೇ ಬಿಡೋಣ. ಎಲ್ಲಾ ಪಾಪ ಪುಣ್ಯ ಆ ಮಲ್ಲಯ್ಯನ ಪ್ರಸಾದ ಅಂಥ ತಿಳಿಕೊಂಡ್ರಾಯ್ತು!' ಸುಸ್ತಾಗಿದ್ದ ಶಿವಪ್ಪರಿಂದ ನಿರಾಶಾದಾಯಕ ಮಾತು ಬಂದಾಗ 'ನೀವು ಅನಕಾ ಎರಡ ದಿನದ ಮಟ್ಟಿಗೆ ಯಾರದರ ಬಿಚ್ಚಿಟ್ಟ ಚಪ್ಪಲಿ ಹಾಕೊಂಡು ನಡದಾಡಿರಿ.... ಆ ಮ್ಯಾಲ ಗಾಡಿ ಹತ್ತಿ ಊರಿಗೆ ಹೋಗುವ ಮುಂದ, ಆ ಬ್ಯಾರೆದವರ ಪಾಪನ್ನೆಲ್ಲ ಇಲ್ಲೆ ಬಿಟ್ಟು ಹೋಗಿರಿ' ಎಂದು ಹೇಳಿದ ಸಹ ಯಾತ್ರಿಕರ ಮಾತು ಶಿವಪ್ಪನವರಿಗೆ ಗೊಂದಲಕ್ಕೀಡು ಮಾಡಿತು. 'ಹ್ಹಾ, ಹೌದು ನೋಡ್ರಿ, ಅಷ್ಟ ಮಾಡಿದ್ರ ನೀವು ಈ ಶಿಕ್ಷೆಯಿಂದ ಮುಕ್ತಿ ಸಿಗಬೌದು ಸದ್ಯಕ್ಕೆ...' ನನ್ನ ಸಲಹೆ ಅವರಿಗೆ ಧೈರ್ಯ ತಂದಿತು. ಅಷ್ಟರೊಳಗೆ ನಾವೆಲ್ಲ ಅವರು ಚಪ್ಪಲಿ ಕಳೆದುಕೊಂಡ ಛತ್ರದ ಹತ್ತಿರ ಬಂದಿದ್ದೆವು. ಶಿವಪ್ಪನವರ ಹೊಸ ಚಪ್ಪಲಿ ಎಗರಿಸಿಕೊಂಡ ಹೋದ ಜಾಗದಲ್ಲಿ ಹಿಮ್ಮಡದ ಭಾಗ ಸವೆದ ಹಳೆಯ ಚಪ್ಪಲಿಗಳು ಕಾಯುತ್ತಿರುವಂತೆ ಕಾಣಿಸಿದವು.

ಏನು ಮಾಡಬೇಕೆಂದು ತಿಳಿಯದೇ ಪೇಚಾಡಿ ಕೊನೆಗೆ ಮಿತ್ರರು ಕೊಟ್ಟ ಸಲಹೆ ಸದ್ಯಕ್ಕೆ ಸರಿಯಾದುದೆಂದು ಭಾವಿಸಿ 'ಮಲ್ಲಯ್ಯ ನೀನೇ ಕ್ಷಮಿಸಿಬಿಡಪ್ಪ!...' ಎಂದು ನಿಂತಲ್ಲಿಯೇ ದೇವರಿಗೆ ಕೈ ಮುಗಿದು ಇವರಿಗಾಗಿಯೇ ಕಾಯುತ್ತಿದ್ದ ಹಳೆಯ ಚಪ್ಪಲಿಯಲ್ಲಿ ಕಾಲು ತೂರಿಸಿಕೊಂಡು ಛತ್ರದಿಂದ ಹೊರಬಂದು ಎಲ್ಲರೊಂದಿಗೆ ಹೆಜ್ಜೆ ಹಾಕತೊಡಗಿದಾಗ 'ಕಾಲವು ಕುಣಿಸಿದಂತೆ, ಆ ವಿಧಿ ಎಣಿಸಿದಂತೆ ಆಡುವ ಸಮಯದ ಗೊಂಬೆ... ಮಾನವಾ ಆಡುವ ಸಮಯದ ಗೊಂಬೆ' ಎಂಬ ಚಿತ್ರಗೀತೆಯನ್ನು ಶಿವಪ್ಪನವರಿಗೆ ನೆನಪಿಸಿದ್ದೆ.

ಪ್ರತಿಭಟನೆಯ ದ್ಯೋತಕವಾಗಿ ಆಗದವರ ಅಥವಾ ಇಷ್ಟವಿಲ್ಲದವರ ಮೇಲೆ ಜೋಡು ಎಸೆಯುವ ಪದ್ಧತಿ ಇತ್ತೀಚೆಗೆ ಬೆಳೆದಿದೆ. ಜೋಡು ತೂರಿ ಅಸಹನೆಯನ್ನು ಮೊಟ್ಟಮೊದಲು ಮಾಡಿದವನೆಂದರೆ ಇರಾಕಿ ಪತ್ರಕರ್ತ ಮುಂತದಾರ್ ಅಲ್ ಜೈದಿ. ಅವನು ಅಮೆರಿಕ ಅಧ್ಯಕ್ಷ ಜಾರ್ಜ್ ಡಬ್ಲ್ಯು. ಬುಷ್ ಅವರ ಮೇಲೆ ಶೂ ಎಸೆದ. ಅಂದಿನಿಂದ ಶೂ ಎಸೆಯುವುದು ಒಂದು ಅಸ್ತ್ರವಾಗಿ ಕಿಡಿಗೇಡಿ ಪ್ರತಿಭಟನಾಕಾರರಿಗೆ ಪ್ರಿಯವೂ ಆಯಿತು. ಸದಾ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಆಸಕ್ತಿವಹಿಸಿ ಅದನ್ನು ಬೇಗನೆ ಅನುಸರಿಸುತ್ತಿರುವ ಭಾರತೀಯರು ಥಟ್ಟನೆ ಇದನ್ನು ಅನುಸರಿಸಿದರು. ಯಾವಾಗ ಅವಕಾಶ ಸಿಗುತ್ತದೆಯೋ ಆವಾಗ ಚಪ್ಪಲಿ, ಶೂ ಬಾಣಗಳು ವೇದಿಕೆಯ ಮೇಲಿದ್ದ ನಾಯಕರತ್ತ ಚಿಮ್ಮಲು ಪ್ರಾರಂಭಿಸಿದವು. ಭಾರತದಲ್ಲಿ ಶೂ ಬಾಣಕ್ಕೆ ಮೊದಲು ತುತ್ತಾದವರೆಂದರೆ ಕೇಂದ್ರ ಸಚಿವರಾಗಿದ್ದ ಪಿ. ಚಿದಂಬರಂ. ಇವರ ಮೇಲೆ ಪ್ರಯೋಗಿಸಿದ ಮೊದಲಿಗ ಭಾರತೀಯನೆಂದರೆ 'ದೈನಿಕ ಜಾಗರಣ' ಪತ್ರಿಕೆಯ ವರದಿಗಾರ ಜರ್ನೈಲ್ ಸಿಂಗ್. ಹೀಗೆ ಅಸಹನೆಯ ರೂಪಕವಾಗಿ ಜೋಡುಗಳು ಚಲಾವಣೆಯಲ್ಲಿ ಬಂದವು. ಕೆಲವು ದಿನಗಳ ಹಿಂದೆ ಮಧ್ಯಪ್ರದೇಶದ ಇಂದೋರ್‌ನಲ್ಲಿ ಬಾಲಿವುಡ್ ನಟ ಶಾರುಖ್ ಖಾನ್, ಬಾಬಾರಾಮದೇವರನ್ನು 'ಯೋಗ ಮಾಡುವುದನ್ನು ಬಿಟ್ಟು ಸತ್ಯಾಗ್ರಹ ಮಾಡುತ್ತಿರುವುದೇಕೆ? ನಿಮ್ಮ ಕೆಲಸ ನೀವು ಮಾಡಿ. ರಾಜಕಾರಣಿಯಾಗಲು ಹೊರಟ ನೀವು ಅವರ ಪಾದರಕ್ಷೆಯಲ್ಲಿ ನಿಮ್ಮ ಪಾದವನ್ನೇಕೆ ತೂರುತ್ತೀರಿ?' ಎಂದು ಲಘುವಾಗಿ ಲೇವಡಿ ಮಾಡಿದನಂತೆ. ಇದಕ್ಕೆ ರಾಮದೇವರ ಅಭಿಮಾನಿಯೊಬ್ಬರು ಪ್ರತಿಯಾಗಿ 'ಸಿನಿಮಾದಲ್ಲಿ ನಟನೆ ಮಾಡುವುದನ್ನು ಬಿಟ್ಟು, ಕಾಂಗ್ರೆಸ್ ಏಜೆಂಟರಾಗಿ ಕಾಂಗ್ರೆಸ್ಸಿಗರ ಚಪ್ಪಲಿಯಲ್ಲಿ ನೀವೇಕೆ ಕಾಲು ತೂರಿಸಿದ್ದೀರಿ?' ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರಂತೆ. ಇನ್ನು ಕೆಲವು ಸಲ ನಾಯಕರನ್ನು ತೀರಾ ಕೆಳಮಟ್ಟಕ್ಕೆ